

## ದಾಂಪತ್ಯದ ಅಭಿಪ್ರಾಯ ಭೇದಗಳನ್ನು ವಿಜೃಂಭಣೆಯಿಂದ ಆಚರಿಸಲು ಸಾಧ್ಯವಿಲ್ಲವೆ?

ಡಾ.ವಿನೋದ ಛೆಬ್ಬಿ

# 47: ಧ್ರುಪದ್ ಜುಗಲಬಂದಿ

ದಾಂಪತ್ಯದಲ್ಲಿ ಗಂಡು ತನ್ನ ಮೇಲೆ ಹೆಣ್ಣಿನ ಭಾವನಾತ್ಮಕ ಪ್ರಭಾವವನ್ನು ಒಪ್ಪಿಕೊಳ್ಳುವುದರ ಬಗೆಗೆ ಮಾತಾಡುತ್ತಿದ್ದೆವು. ಇದಕ್ಕೆ ಅಗತ್ಯವಾದ ಭಾವನಿರ್ಧಾರವು ಎಷ್ಟೇ ಸಂಕೀರ್ಣವಿದ್ದರೂ ಇದನ್ನು ಹೇಗೆ ನಿರ್ವಹಿಸಬಹುದು ಎಂಬುದನ್ನು ಒಂದು ಉದಾಹರಣೆ ಮೂಲಕ ತಿಳಿಯೋಣ.

ಇಲ್ಲಿ ಹೆಂಡತಿ ಕುಟುಂಬ ಸಹಿತ ದೇವಸ್ಥಾನಕ್ಕೆ ಹೋಗಲು ಯೋಚಿಸುತ್ತಿದ್ದಾಳೆ. ಆದರೆ ಗಂಡ ನಾಸ್ತಿಕ. ಆಕೆ ಹೀಗೆ ಶುರುಮಾಡುತ್ತಾಳೆ:

ಹೆಂಡತಿ: ರೀ, ನಾಡಿದ್ದು ನಮ್ಮ ಪುಟ್ಟನ ಹುಟ್ಟುಹಬ್ಬ. ಸಾಯಂಕಾಲ ಪಾರ್ಟಿಗೆ ಅವನ ಸ್ನೇಹಿತರೆಲ್ಲ ಬರುತ್ತಿದ್ದಾರೆ. ಹಾಗೆಯೇ ಬೆಳಿಗ್ಗೆ ದೇವಸ್ಥಾನದಲ್ಲಿ ಅವನನ್ನು ಕರೆದೊಯ್ದು ಅರ್ಚನೆ ಮಾಡಿಸಬೇಕೆಂದು ಅಂದುಕೊಂಡಿದ್ದೀನಿ.

ಗಂ: ದೇವಸ್ಥಾನಕ್ಕಾ? ಸರಿ, ಹೋಗಿ ಬಾ.

ಹೆಂ: ಹತ್ತಿರದಲ್ಲೇ ನಮ್ಮ ಕುಲದೇವರು ಶ್ರೀನಿವಾಸನ ದೇವಸ್ಥಾನಕ್ಕೆ... (ಗಂಡನ ಮುಖಭಾವ ಗಂಭೀರವಾದುದನ್ನು ಗಮನಿಸಿ) ನನಗ್ಗೊತ್ತು ನಿಮಗೆ ದೇವರ ಮೇಲೆ ನಂಬಿಕೆಯಿಲ್ಲ. ಅದರಲ್ಲೂ ಶ್ರೀನಿವಾಸನ ಬಗೆಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಅವನು ಲಕ್ಷ್ಮಿಯಂಥ ಲಕ್ಷ್ಮಿಯನ್ನು ಬಿಟ್ಟು ಪದ್ಮಾವತಿಯ ಬೆನ್ನು ಯಾಕೆ ಹತ್ತಬೇಕಿತ್ತು, ತೀರಲಾರದ ಸಾಲದ ಹೊತ್ತು ಇನ್ನೊಂದು ಮದುವೆ ಯಾಕೆ ಆಗಬೇಕಿತ್ತು, ಭಕ್ತರ ತಲೆಯ ಮೇಲೆ ಸಾಲ ಹೇರುವವನು ಅದೆಂಥ ಅವತಾರ, ಯಾವ ದುಷ್ಟರನ್ನೂ ಶಿಕ್ಷಿಸದೆ ಇರುವವ ನಮ್ಮನ್ನು ಹೇಗೆ ರಕ್ಷಿಸಬಲ್ಲ ಅಂತೀರಿ. ನಿಮ್ಮ ವಾದವನ್ನು ನಾನೂ ಒಪ್ಪುತ್ತೇನೆ. (ಸ್ವಲ್ಪ ಅಂತರ್ಮುಖಿಯಾಗಿ) ಈ ಸಂದೇಹ ನನಗೂ ಕಾಡಿದ್ದಿದೆ. ಆದರೂ ನೀವು ನಮ್ಮ ಜೊತೆಗೆ ಬಂದರೆ...

ಗಂ: ನನ್ನ ಮನಸ್ಸಿನ ವಿರುದ್ಧ ನಡಕೋಬೇಕಾ? (ಹೆಂಡತಿಯ ಪ್ರಭಾವವನ್ನು ಪ್ರತಿರೋಧಿಸುತ್ತಿದ್ದಾನೆ.)

ಹೆಂ: ಖಂಡಿತ ನಡಕೋಬೇಡಿ. ನೀವು ಹೊರಗೊಂದು ಒಳಗೊಂದು ಇರುವುದು ನನಗೂ ಇಷ್ಟವಿಲ್ಲ. ಆದರೆ ದೇವರುಗಳ ವಿಷಯದಲ್ಲಿ ಇತರರ ನಂಬಿಕೆಯ ಬಗೆಗೆ ತೆರೆದ ಮನಸ್ಸು ಇಟ್ಟುಕೊಳ್ಳಿ ಎಂದಷ್ಟೇ ಹೇಳುತ್ತಿದ್ದೇನೆ.

ಗಂ: ಹ್ಲೂಂ... ಆಯಿತು, ನೀನು ಹೇಳುತ್ತಿದ್ದೀಯಾ ಅಂತ ಬರುತ್ತಿದ್ದೇನೆ.

ಹೆಂ: ನೀವು ನನಗೋಸ್ಕರ ಬರುವುದು ಬೇಡ. ಪುಟ್ಟನಿಗೋಸ್ಕರವೂ ಬೇಡ. ಬೇರೆಯವರಿಗೋಸ್ಕರ ನಿಮ್ಮ ಅಂತಃಸಾಕ್ಷಿಯ ವಿರುದ್ಧ ಡಾಂಬಿಕರಾಗುವುದು ನನಗಿಷ್ಟ ಇಲ್ಲ. (ಹೆಂಡತಿ ಅವನ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿದ್ದಾಳೆ.)

ಗಂ: ದೇವರ ವಿಷಯದಲ್ಲಿ ನಮ್ಮಿಬ್ಬರ ನಂಬಿಕೆಗಳು ಬೇರೆಬೇರೆ ಅಂತ ಮದುವೆಗೆ ಮುಂಚೆ ಒಪ್ಪಿಕೊಂಡಿದ್ದೆವಲ್ಲ? (ತಮಗೆ ಪರಸ್ಪರ ಒಪ್ಪಿಗೆ ಇರುವ/ಇರದಿರುವ ವಿಷಯಗಳನ್ನು ವರ್ಗೀಕರಿಸುತ್ತಿದ್ದಾನೆ.)

ಹೆಂ: ನಾನು ನೀವು ನಂಬಬೇಕೆಂದು ನಾನೂ ಒತ್ತಾಯಿಸೋದಿಲ್ಲ. ಅಷ್ಟಲ್ಲದೇ ಅನೇಕ ಆಚರಣೆಗಳನ್ನು ನಾನೂ ನಂಬುವುದಿಲ್ಲ. ಅದಕ್ಕೇ ನಮ್ಮ ಮನೆಯಲ್ಲಿ ಪೂಜೆ ಅಷ್ಟಾಗಿ ಮಾಡುವುದಿಲ್ಲ. ಹೋಮ ಹವನವಂತೂ ಇಲ್ಲವೇ ಇಲ್ಲ. ಇವೆಲ್ಲ ಅಗತ್ಯ ಅಂತ ನನಗೂ ಅನ್ನಿಸುವುದಿಲ್ಲ. (ಗಂಡನ ಪ್ರತ್ಯೇಕತೆಯನ್ನು ಗೌರವಿಸುತ್ತ, ತನಗೂ ಅದರ ಅಗತ್ಯ ಇದೆ ಎಂದು ತನ್ನ ಮನದಾಳವನ್ನು ಬಿಚ್ಚಿಡುತ್ತಿದ್ದಾಳೆ.) ಆದರೆ ದೇವಸ್ಥಾನಕ್ಕೆ ಹೋಗುವಂಥ ಸಾರ್ವಜನಿಕ ವಿಷಯದಲ್ಲಿ ಪುಟ್ಟ ಅಪ್ಪ ನಮ್ಮ ಜೊತೆಗೆ ಯಾಕೆ ಬರುವುದಿಲ್ಲ ಎಂದು ಕೇಳಿದರೆ ನಾನೇನು ಉತ್ತರ ಕೊಡಲಿ? (ತನ್ನ ಸಂದಿಗ್ಧತೆಯನ್ನು ಹಂಚಿಕೊಳ್ಳುತ್ತಿದ್ದಾಳೆ.)

ಈಗ ಗಂಡನಿಗೂ ಸಂದಿಗ್ಧತೆ ಉಂಟಾಗುತ್ತದೆ. ಭಾವನೆಗೆ ತೆರೆದುಕೊಳ್ಳುವ ಮನಸ್ಸಿರುವ ಬುದ್ಧಿವಂತ ಜನರು ಸಂದಿಗ್ಧತೆಯನ್ನು ಎದುರಿಸಬೇಕಾದರೆ ಏನು ಮಾಡುತ್ತಾರೆ? ಹಾಸ್ಯಪ್ರಜ್ಞೆ ಮೆರೆಯುತ್ತಾರೆ!

ಗಂ: (ನಗುತ್ತ) ನಿನ್ನಪ್ಪನಿಗೆ ದೇವರಲ್ಲಿ ನಂಬಿಕೆ ಇಲ್ಲ ಪುಟ್ಟಾ ಎಂದು ಹೇಳು. ಅವನೂ ದೇವರ ಕಲ್ಪನೆಯ ಮೇಲೆ ಭಾರ ಊರದೆ ಬದುಕಲು ಕಲಿಯುತ್ತಾನೆ! (ಇಬ್ಬರೂ ನಗುತ್ತಾರೆ.) ಹಂ... ಸರಿ ಹಾಗಾದರೆ ಯಾರಿಗೋಸ್ಕರ ಬರಬೇಕು ಅಂತಿದ್ದೀಯಾ? (ಗಂಡ ತನ್ನ ಪ್ರತಿರೋಧದ ಚಿಲಕತ್ತನ್ನು ಕಳಚುತ್ತಿದ್ದಾನೆ.)

ಹೆಂ: ಯಾರಿಗೋಸ್ಕರ ಅಂತ ಬಿಟ್ಟು ನಿಮಗೋಸ್ಕರ, ಸ್ವಂತಕ್ಕೋಸ್ಕರ ಆಗಬಹುದೇ ಎಂದು ಒಂದು ಕ್ಷಣ ತೆರೆದ ಮನಸ್ಸಿನಿಂದ ಯೋಚಿಸಿ.

ಗಂ: (ಗೊಂದಲಕ್ಕೆ ಒಳಗಾಗುತ್ತ) ನನಗೋಸ್ಕರ ಆಗುವುದಿಲ್ಲ ಎಂದೆನಲ್ಲ?

ಹೆಂ: ತೆರೆದ ಮನಸ್ಸಿನಿಂದ ಯೋಚಿಸಿ ಎಂದು ಮಾತ್ರ ಹೇಳುತ್ತಿದ್ದೇನೆ. (ಹೆಂಡತಿ ಗಂಡನಿಗೆ ಹೊಸ ಪ್ರಭಾವಕ್ಕೊಳಗಾಗಲು ತಯಾರು ಮಾಡುತ್ತಿದ್ದಾಳೆ. ಇದು ಗಂಡನನ್ನು ವಿಚಾರ ಮಾಡಲು ಹಚ್ಚುತ್ತಿದೆ.)

ಗಂ: ಆಯಿತು... ತೆರೆದ ಮನಸ್ಸಿನಿಂದ ಯೋಚಿಸುತ್ತಿದ್ದೇನೆ... ಏನೂ ಹೊಳೆಯುತ್ತಿಲ್ಲವಲ್ಲ? (ಬದಲಾವಣೆಗೆ ತನ್ನನ್ನು ತಾನು ತೆರೆದುಕೊಳ್ಳುತ್ತಿದ್ದಾನೆ.)

ಹೆಂ: ನಮ್ಮ ಕುಟುಂಬದ ಸದಸ್ಯರಾಗಿ ಬನ್ನಿ. ಯಾಕೆಂದರೆ ಯಾರೊಬ್ಬರೂ ಬರದಿದ್ದರೆ ಇಡೀ ಕುಟುಂಬ ಎಂದು ಅನ್ನಿಸಿಕೊಳ್ಳುವುದಿಲ್ಲ. (ತಮ್ಮಿಬ್ಬರ ಪ್ರತ್ಯೇಕತೆಯಲ್ಲಿ ಏಕತೆಯ ಅಗತ್ಯ ಕಾಣುತ್ತಿದ್ದಾಳೆ.)

ಗಂ: ಹೌದು...

ಹೆಂ: ನಾವಿಬ್ಬರೂ ಒಟ್ಟಾಗಿ ಕೆಲವು ಮಾದರಿಗಳನ್ನು ನಮ್ಮ ಪುಟ್ಟನಿಗೆ ತೋರಿಸುವ ಅಗತ್ಯ ಇದೆ. ನಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯ ಇದ್ದರೆ ಅವನಿಗೆ ಕುಟುಂಬ ವ್ಯವಸ್ಥೆಯಲ್ಲಿ ವಿಶ್ವಾಸ ಮೂಡಲಿಕ್ಕಿಲ್ಲ. ನಾವು ಮೂವರೂ ಒಟ್ಟಾಗಿ ಸೇರಿ ಸಾಂಸ್ಕೃತಿಕ ಆಚರಣೆಗಳಲ್ಲಿ ಪಾಲುಗೊಳ್ಳುವುದು ಅಗತ್ಯ ಎಂದು ನನಗೆ ಅನ್ನಿಸುತ್ತದೆ. (ಇಲ್ಲಿ ಹೆಂಡತಿ ಯಾವ ಧೋರಣೆಯನ್ನೂ ತೋರದೆ ತನ್ನ ಅನಿಸಿಕೆಗಳನ್ನು ಮಾತ್ರ ಹಂಚಿಕೊಳ್ಳುತ್ತಿದ್ದಾಳೆ.)

ಗಂ: ಇದೆಲ್ಲ ಅಷ್ಟು ಮುಖ್ಯವಾ? (ಗಂಡ ಇನ್ನಷ್ಟು ತೆರೆದುಕೊಳ್ಳುತ್ತಿದ್ದಾನೆ.)

ಹೆಂ: ಪುಟ್ಟನಿಗೆ ನಮ್ಮ ಸಂಸ್ಕೃತಿಯ ಬೇರುಗಳು ಬೇಕು– ಅವುಗಳು ಕೊರತೆಯಿಂದ ಕೂಡಿದ್ದರೂ ಸರಿ. ಇಲ್ಲದಿದ್ದರೆ ಅವನು ಸೂಪರ್‌ಮ್ಯಾನ್, ಸ್ಪೈಡರ್‌ಮ್ಯಾನ್ ಅಂತ ಕಲಿಯುತ್ತಾನೆ. ಪಿಜ್ಜಾ ಲಿನ ಸಂಸ್ಕೃತಿ ಕಲಿಯುತ್ತಾನೆ. ಇದಕ್ಕಿಂತ ನಮ್ಮ ದೋಷಪೂರಿತ ಸಂಪ್ರದಾಯ–ಸಂಸ್ಕೃತಿಯನ್ನು ಕಲಿಸುವುದು ಎಷ್ಟೋ ಉತ್ತಮ ಅಂತ ನಿಮಗೆ ಅನ್ನಿಸುವುದಿಲ್ಲವೆ? (ಚಿಂತೆಯನ್ನು ಹೊರಹಾಕುತ್ತ ತನ್ನ ಆತಂಕವನ್ನು ಹಂಚಿಕೊಳ್ಳುತ್ತಿದ್ದಾಳೆ.)

ಗಂ: (ಯೋಚಿಸುತ್ತ) ಹೌದು... ಬೇಕಾದರೆ ಅವನು ದೊಡ್ಡವನಾಗಿ ತನ್ನ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವಾಗ ತನಗೇನು ಬೇಕೋ ಅದನ್ನು ಆರಿಸಿಕೊಳ್ಳುತ್ತಾನೆ... ಸರಿ ಹಾಗಾದರೆ, ನಾನು ಪಂಚೆ ಉಟ್ಟುಕೊಳ್ಳಲೋ ಅಥವಾ ಪ್ಯಾಂಟ್ ಮೇಲೆ ಬಂದರೆ ನಡೆಯುತ್ತದೋ? (ಗಂಡ ಹೆಂಡತಿಯ ಭಾವಪ್ರಭಾವಕ್ಕೆ ಸಂಪೂರ್ಣ ಒಳಗಾಗಿದ್ದಾನೆ.)

ಇಲ್ಲೇನು ನಡೆಯಿತು? ಗಂಡನ ಪ್ರಾರಂಭಿಕ ಪ್ರತಿರೋಧ ಹಾಗೂ ಹೆಂಡತಿಯ ಭಾವನೆಗಳಿಗೆ ಬೆಲೆಕೊಡುವ ಒಲವು, ನಂತರ ಸಂದಿಗ್ಧತೆ, ಕೌಟುಂಬಿಕ ಹಿತಕ್ಕೆ ಬದ್ಧತೆ, ಮನಸ್ಸಿಗೆ ವಿರುದ್ಧವಾದರೂ ತನ್ನ ನಡತೆಯಲ್ಲಿ ಬದಲಾವಣೆಯ ಅಗತ್ಯದ ಮನವರಿಕೆ, ಕೊನೆಗೆ ತನ್ನ ನಂಬಿಕೆಯನ್ನು ಬಿಡದೆ ಕುಟುಂಬದ ಹಿತವನ್ನು ಬಯಸುವ ನಿಲುವು– ಇವೆಲ್ಲವುಗಳಿಗೆ ಒಂದೊಂದಾಗಿ ತೆರೆದುಕೊಳ್ಳುತ್ತಿದ್ದಾನೆ. ನಾಸ್ತಿಕನಾದರೂ ಸಂಪ್ರದಾಯ–ಸಂಸ್ಕೃತಿಗಳಿಗೆ ಬದ್ಧನಾಗುತ್ತಿದ್ದಾನೆ.

ಗಂಡ ಹೀಗೆ ಬದಲಾಗಲು ಹೆಂಡತಿಯ ಕೊಡುಗೆಯಲ್ಲೇನೂ ಕಡಿಮೆಯಿಲ್ಲ. ಅವಳ ಮುಖ್ಯ ಕೌಶಲ್ಯವೆಂದರೆ ಗಂಡನ ಅಭಿಪ್ರಾಯವನ್ನು ಗೌರವಿಸುವುದು, ಹಾಗೂ ಬದಲಾವಣೆಗೆ ಸೌಮ್ಯಸ್ವರದ ನಿಧಾನವಾದ ಪ್ರಸ್ತಾಪ. ಈ ಸಂದರ್ಭದಲ್ಲಿ ನನಗೆ ಹಿಂದುಸ್ತಾನಿ ಸಂಗೀತದ ಧ್ರುಪದ್ ಗಾಯನಶೈಲಿಯಲ್ಲಿ ಪಕ್ಕವಾದ್ಯವಿಲ್ಲದೆ ಹಾಡುವ ಜುಗಲ್‌ಬಂದಿ ನೆನಪಿಗೆ ಬರುತ್ತದೆ. ಪ್ರಾರಂಭದಲ್ಲಿ ಗಂಡನ ಸ್ವರಕ್ಕೆ ತನ್ನ ಸ್ವರವನ್ನು ಮೇಳೈಸುವ ಸ್ವರಪ್ರಸ್ತಾರ, ನಂತರ ತನ್ನದೇ ಶೈಲಿಯಲ್ಲಿ ಆಲಾಪವನ್ನು ವಿಸ್ತರಿಸುತ್ತ ಸಂವಹನದ ಸ್ವರಗಳನ್ನು ಅಲಂಕರಿಸುವ ಕೌಶಲ್ಯ, ತನ್ನ ವಾಗ್ವಾದವನ್ನು ವಿಲಂಬಿತ ಗತಿಯಲ್ಲಿ ಕ್ರಮೇಣ ತನ್ನ ದಿಕ್ಕಿಗೆ ವಿಸ್ತರಿಸುತ್ತ ಅದರಲ್ಲಿ ಗಂಡನನ್ನು ಸೆಳೆದುಕೊಳ್ಳುವ ರೀತಿ, ಕೊನೆಗೆ ಇಬ್ಬರೂ ಏಕೋಭಾವದ ರಾಗ ಹಾಡುತ್ತ ಪರಸ್ಪರರಲ್ಲಿ ಲೀನವಾಗುವ ತಾದಾತ್ಮ್ಯತೆ – ಇದಾವ ಸಂಗೀತಕ್ಕೆ ಕಡಿಮೆ ಹೇಳಿ?

ಸಂಗಾತಿಯ ಭಾವಪ್ರಭಾವಕ್ಕೆ ಒಳಗಾದರೆ ದಾಂಪತ್ಯದ ತೀವ್ರ ಅಭಿಪ್ರಾಯ ಭೇದಗಳನ್ನು ಕೂಡ ವಿಜೃಂಭಣೆಯಿಂದ ಆಚರಿಸಲು ಸಾಧ್ಯವಿದೆ!

**ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.**
**ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);**
**ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)**
**ಲೇಖಕರ ವಿಳಾಸ: www.medisex.org**